ವಧುವಾಗಿರುತ್ತಿದ್ದಳು. ಪ್ರೇಮವಿವಾಹದ ಪ್ರಶ್ನೆಯೇ ಇರಲಿಲ್ಲ. ಇದನ್ನು ಬೇಂದ್ರೆ ಎಷ್ಟು ಕಟುವಾಗಿ ಹೇಳುತ್ತಾರೆ ನೋಡಿ:

'ಭಾರತೀಯರ ಜೀವನದಲ್ಲಿಯೂ ಕಾವ್ಯದಲ್ಲಿಯೂ ದಾಂಪತ್ಯ–ಪ್ರಣಯಕ್ಕೆ ಸ್ಥಾನವಿಲ್ಲ. ಕಾವ್ಯದಂತೆಯೇ ಜೀವನದಲ್ಲಿಯೂ ಪ್ರಣಯದ ವಿಲಾಸವು ವೇಶ್ಯಾವಾಟದ ಆವರಣದಲ್ಲಿ ಮಿಂಚಾಡುವುದು (ಔದುಂಬರ ಗಾಥೆ, ಸಂಪುಟ 3, ಪುಟ 85).



ಆದ್ದರಿಂದಲೇ ಅವರ ಅತ್ಯುತ್ತಮ ಪ್ರಣಯಗೀತೆಗಳಲ್ಲಿ ಒಂದಾದ 'ಹುಬ್ಬಳ್ಳಿಯಂವಾ' ಪದ್ಯದಲ್ಲಿ ಪ್ರಣಯಿಗಳು ಒಬ್ಬ ಜೋಗತಿ ಮತ್ತು ಸೆಟ್ಟರ ಹುಡುಗ ದಂಪತಿಗಳಲ್ಲ. ನಾನು ಉದ್ಧರಿಸಿದ ಟಿಪ್ಪಣಿಯ ಮುಂದಿನ ಭಾಗವು 'ಸಖೀಗೀತ'ದ ವಿವರಣೆಯಾಗಿದೆ.

''ಅಗ್ನಿಸಾಕ್ಷಿಯಾಗಿ, ದಾನವಾಗಿ ಬಂದ ಕನ್ನೆಯನ್ನು ಸ್ನೇಹದ ಅಭ್ಯಾಸದಿಂದ, ಸುಖದುಃಖಗಳಲ್ಲಿ ಸಮಭಾಗಿಯಾಗುವ ಸಹಾನುಭೂತಿಯ ಅಂತಃಕರಣದಿಂದ ಸಖಿಯನ್ನಾಗಿ ಮಾಡುವ ಕ್ರಮವೊಂದು ಎಡಬಿಡದೆ ಸಾಗಿರುವುದು. ಆ ಕ್ರಮದಲ್ಲಿ ಸ್ನೇಹದ ವಿವಿಧ ರೂಪಗಳೂ ತಮ್ಮ ತಮ್ಮ ಪಾತ್ರವನ್ನಾಡಿ ನಾಯಕಪಾತ್ರಕ್ಕೆ ರಸಭಾವಗಳ ಪ್ರಭಾವಲಯವನ್ನು ಕಟ್ಟುವವು. ಅಂತಹ ಚಿತ್ರವೊಂದು ಪೂರ್ವಾನುರಾಗವಾಗಿ 'ಸಖೀಗೀತ'ದಲ್ಲಿದೆ.'' (ಔದುಂಬರ ಗಾಥೆ, ಸಂಪುಟ 3, ಪುಟ 85).

ಅಂದರೆ ಈ ಪದ್ಯದಲ್ಲಿ 'ಸಖಿ' ಮತ್ತು 'ಸಖ'ರು ಇರುವುದಿಲ್ಲ. ಆಗುತ್ತಾರೆ. ಹೀಗಾಗಿ ಅವರು ಯಾವುದೇ ಸಿದ್ಧ ಮಾದರಿಗೆ ಒಗ್ಗುವವರಲ್ಲ, ಅವಳು ವಿಧಿ ತಂದ ವಧು, ಹದಿಮೂರು ವರ್ಷದ ಕನ್ನೆ. ಸ್ವತಃ ಬೇಂದ್ರೆ ಜೋತಿಷ್ಯ ಪರಿಣಿತರಾಗಿದ್ದರಿಂದ ತಮ್ಮಿಬ್ಬರ ಜಾತಕವನ್ನು ನೋಡಿದರಂತೆ. ಕೂಡಿಬರುವ ಗುಣಗಳು ಸ್ವಲ್ಪ ಕಡಿಮೆ ಎಂದು ತಾಯಿಗೆ ಹೇಳಿದರಂತೆ. ತಾಯಿ ಅಠವಲೆ ಮಹಾರಾಜರಿಗೆ ಮನಸ್ಸಿನಲ್ಲಿ ಪ್ರಾರ್ಥನೆ ಮಾಡಿ ಅವರ ಪುಸ್ತಕವನ್ನು ಕೈಯಲ್ಲಿ ಹಿಡಿದು ಪ್ರಶ್ನೆ ಕೇಳಿದಾಗ, 'ಆಗಬಹುದು' ಎಂದು ಉತ್ತರ ಬಂದಿತಂತೆ! ಹೀಗಾಗಿ ಪದ್ಯದ 'ವಿಧಿ ತಂದ ವಧು' ಎನ್ನುವುದಕ್ಕೆ ಈ ಹಿನ್ನೆಲೆಯೂ ಇದೆ! ಅಂತೂ ಮಂತ್ರದ ತಂತ್ರದ ಮಂದಿವಾಳದ ಮದುವೆಯಲ್ಲಿ ಅಂತಃಪಟದ ಆಚೆಗೆ ನಿಂತಿರುವ ಅವಳು ಹೆಂಡತಿಯಾಗಿ ಮನೆಗೆ ಬರುತ್ತಾಳೆ. ದೊಡ್ಡವಳಾದ ಮೇಲೆ ಸಖನ ಜೊತೆಗೆ ಮೈಸಲಿಗೆ ಬೆಳೆಸುತ್ತಾಳೆ. ಏಕಾಂತಕ್ಕೆ ಎಳೆಯುತ್ತಾಳೆ. ಅದೆಷ್ಟು ಸಹಜವಾಗಿ ಸರಳವಾಗಿ ಬೇಂದ್ರೆ ಈ ಹರೆಯದ ಹಬ್ಬವನ್ನು ವರ್ಣಿಸುತ್ತಾರೆ! 'ದೇವ ಕಾಮವೇ ಕಾಮದೇವನಾಗಿ' ಬರುವುದನ್ನು ಹಾಗೂ ಕಾಮವೇ ಬದುಕಿನ ಮೂಲ ಸ್ರೋತವೆಂದು ನಂಬಿದ ಕವಿಗೆ ಇದು ಸಹಜವೇ. ಈ ಹಬ್ಬದ ಫಲವಾಗಿ ಅವಳು ಗರ್ಭಿಣಿಯಾಗುತ್ತಾಳೆ. ಆದರೆ, ಮೊದಲಿನ ಫಲವೊಂದು ಮಣ್ಣಿಗೆ ಮೀಸಲಾಗುತ್ತದೆ. ಅಲ್ಲಿಂದಾಚೆಗೆ ಹುಟ್ಟಿದ ಆರು ಮಕ್ಕಳಲ್ಲಿ ನಾಲ್ಕನ್ನು ಅವರು ಕಳೆದುಕೊಳ್ಳುತ್ತಾರೆ. ತಾಯಿಯು ತೀರಿಹೋಗುತ್ತಾಳೆ. ವಿಪರೀತ ಬಡತನ. ಚಿಕ್ಕಪ್ಪನ ಮನೆ ಮತ್ತು ಅವನ ಔದಾರ್ಯದ ಮೇಲೆ ಅವಲಂಬನೆ. ಇದು ಸಾಲದು ಎಂಬಂತೆ 'ನರಬಲಿ' ಪದ್ಯವನ್ನು ಬರೆದದ್ದಕ್ಕಾಗಿ ಹಿಂಡಲಗಾ ಜೈಲಿನಲ್ಲಿ ವಾಸ. ನಂತರ ಮುಗದದಲ್ಲಿ 'ನಜರಬಂದ್' ಶಿಕ್ಷೆ.